# ಕರ್ನಾಟಕ ಸರ್ಕಾರ

## ಕುಂದುಕೊರತೆ ನಿವಾರಣಾ ಪ್ರಾಧಿಕಾರದ  ನಡವಳಿಗಳು

**ಪ್ರಕರಣ ಸಂಖ್ಯೆ:ಜಿಪಂಚಿ:ಕುಕೊನಿಪ್ರಾ:ಸಿಆರ್:606:2021-22**

**ಕುಂದುಕೊರತೆ ನಿವಾರಣಾ ಪ್ರಾಧಿಕಾರ,**
**ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.**
**ದಿನಾಂಕ:30-05-2022.**

ಶ್ರೀ ಜಿ.ಯು.ತಿಮ್ಮಪ್ಪ ಬಿನ್ ಲೇಟ್ ಹೆಚ್.ಉಗ್ರಪ್ಪ,
ಗುಳ್ಳದಮನೆ ಗ್ರಾಮ,
ತರೀಕೆರೆ ತಾಲ್ಲೂಕು. . . . ದೂರುದಾರರು

**ವಿರುದ್ಧ**

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಗುಳ್ಳದಮನೆ ಗ್ರಾಮ ಪಂಚಾಯಿತಿ,
ತರೀಕೆರೆ ತಾಲ್ಲೂಕು. . . . ಪ್ರತಿವಾದಿಗಳು

****************

ದಿನಾಂಕ:04-02-2022ರಂದು ಶ್ರೀ ಜಿ.ಯು ತಿಮ್ಮಪ್ಪ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕು (ಇಲ್ಲಿ ಇನ್ನು ಮುಂದೆ ದೂರುದಾರರು ಎಂದು ಉಲ್ಲೇಖಿಸಲಾಗಿದೆ)ರವರು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ದೂರು ನೀಡಿ ಸದರಿ ದೂರಿನಲ್ಲಿ ತರೀಕೆರೆ ತಾಲ್ಲೂಕಿನ ಗುಳ್ಳದಮನೆ ಗ್ರಾಮ ಪಂಚಾಯಿತಿಯಲ್ಲಿ ಗುಳ್ಳದಮನೆ ಗ್ರಾಮಕ್ಕೆ ಸಂಬಂಧಿಸಿದಂತೆ ಮೂರು ಅಸೆಸ್‌ಮೆಂಟ್ ರಿಜಿಸ್ಟರ್ ಗಳಿದ್ದು, ಎರಡರಲ್ಲಿ ಜಿ.ಯ ತಿಮ್ಮಪ್ಪ ಬಿನ್ ಉಗ್ರಪ್ಪ ಎಂಬ ಹೆಸರು ನಮೂದಾಗಿದ್ದು, ಒಂದು ಪುಸ್ತಕದಲ್ಲಿ ಜಿ.ಯು ಲಕ್ಷ್ಮಣಗೌಡ ಬಿನ್ ಲೇಟ್ ಉಗ್ರಪ್ಪ ಎಂಬ ಹೆಸರು ನಮೂದಾಗಿರುತ್ತದೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಿನಾಂಕ:12-01-2022ರ ಪತ್ರದಲ್ಲಿ ಮಾಹಿತಿ ನೀಡಿರುತ್ತಾರೆ. ಆದರೆ ನಾವು ಅವರಿಗೆ ಯಾವುದೇ ಕರಾರು ಒಪ್ಪಿಗೆ ಪತ್ರವಾಗಲಿ ಅಥವಾ ಕ್ರಯ ಪತ್ರವಾಗಲಿ, ಮತ್ತು ಯಾವುದೇ ರೀತಿಯ ಮಾರಾಟ ಮಾಡಿರುವುದಿಲ್ಲ. ಮೂಲ ಮಾರಾಟ ಪತ್ರಗಳಿಲ್ಲದೆ ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹೆಸರುಗಳನ್ನು ತಿದ್ದುಪಡಿ ಮಾಡಿರುತ್ತಾರೆಂದು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ (ಇನ್ನು ಮುಂದೆ ಇಲ್ಲಿ ಪ್ರಾಧಿಕಾರವೆಂದು ಉಲ್ಲೇಖಿಸಲಾಗಿದೆ) ದೂರನ್ನು ದಾಖಲಿಸಿರುತ್ತಾರೆ. (ಇದನ್ನು Annexure A ಎಂದು ಗುರುತಿಸಲಾಗಿದೆ)

ದಿನಾಂಕ:07-02-2022ರಂದು ಸದರಿ ದೂರಿಗೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಒಂದು ವಾರದೊಳಗಾಗಿ ವರದಿಯನ್ನು ಸಲ್ಲಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರಿಗೆ ಸೂಚಿಸಲಾಗಿತ್ತು. (ಇದನ್ನು Annexure B ಎಂದು ಗುರುತಿಸಲಾಗಿದೆ)

ಪ್ರಸ್ತುತ ದೂರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 296–ಬಿ ಯ, ಉಪ–ಪ್ರಕರಣ(3)ರಡಿಯಲ್ಲಿ ಬರುವುದರಿಂದ, ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಈ ದೂರನ್ನು ವಿಚಾರಣೆ ಮಾಡಿ ಆದೇಶ ಮಾಡಲು ವ್ಯಾಪ್ತಿ ಹೊಂದಿರುವುದರಿಂದ, ಈ ದೂರನ್ನು ವಿಚಾರಣೆ ಮಾಡಲು ಸಕ್ಷಮ ಪ್ರಾಧಿಕಾರವಾಗಿದ್ದು, ವಿಚಾರಣೆ ನಂತರ ಈ ಆದೇಶ ಹೊರಡಿಸಿದೆ.

ದಿನಾಂಕ:18–02–2022ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರು ಗುಳ್ಳದಮನೆ ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ದಿನಾಂಕ:16–04–2021ರಂದು ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಬಿ. ಮಂಜಪ್ಪ ಇವರು ನನಗೆ ದಿನಾಂಕ:27–05–2021ರಂದು ನನಗೆ ಕಛೇರಿಯ ಚಾರ್ಜನ್ನು ಕೊಟ್ಟಿರುತ್ತಾರೆ. ಅಲ್ಲಿಂದ ಇಲ್ಲಿಯವರೆಗೂ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಅವಧಿಯಲ್ಲಿ ದೂರುದಾರರು ದೂರಿರುವಂತೆ ಅಸೆಸ್‌ಮೆಂಟ್ ಸಂಖ್ಯೆ.10ರಲ್ಲಿರುವ ಸ್ವತ್ತುಗಳನ್ನು ಯಾರ ಹೆಸರಿಗೂ ತಿದ್ದುಪಡಿ ಮಾಡಿರುವುದಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಿಂದೆ ಕಾರ್ಯನಿರ್ವಹಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಬಿ. ಮಂಜಪ್ಪ (ಈಗ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವುದು ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ) ಆದ ಇವರು ತಮ್ಮ ಹಸ್ತಾಕ್ಷರದಿಂದ (ಸ್ವತಃ ತಮ್ಮ ಕೈ ಬರಹದಿಂದ) ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ಹೆಸರು ಬದಲಾವಣೆ ಮಾಡಿ ಫೋಟಾ ಸಹಿಯನ್ನು ಮಾಡಿರುವುದಾಗಿ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. (ಇದನ್ನು Annexure C ಎಂದು ಗುರುತಿಸಲಾಗಿದೆ)

ನಂತರದಲ್ಲಿ ದಿನಾಂಕ:24–02–2022ರಂದು ಪ್ರಾಧಿಕಾರವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನೀಡಿರುವ ವರದಿಯನ್ನು ಪರಿಶೀಲಿಸಿ, ಶ್ರೀ ಬಿ. ಮಂಜಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಲಿ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿಯವರಿಗೆ ಹಾಗೂ ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರಿಗೆ ನೋಟೀಸ್ ಜಾರಿ ಮಾಡಿ ಸದರಿ ದೂರಿಗೆ ಸಂಬಂಧಿಸಿದಂತೆ ದಿನಾಂಕ:03–03–2022ರಂದು ಬೆಳಿಗ್ಗೆ 11–30 ಗಂಟೆಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಹೇಳಿಕೆಯನ್ನು ನೀಡಲು ಸೂಚಿಸಲಾಗಿತ್ತು. (ಇದನ್ನು Annexure D ಎಂದು ಗುರುತಿಸಲಾಗಿದೆ)

ಅದರಂತೆ ಶ್ರೀ ಎಲ್.ಆರ್ ಈಶ್ವರಯ್ಯ, ಪ್ರಭಾರ ಪಂಚಾಯಿತಿ ಅಭಿವೃದ್ದಿ ಅಧಿಕಾರಿ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರಿಗೆ ದಿನಾಂಕ:03–03–2022ರಂದು ಬೆಳಿಗ್ಗೆ 11–30 ಗಂಟೆಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಹೇಳಿಕೆ ನೀಡಲು ತಿಳಿಸಿದನ್ವಯ ಆ ನಿರ್ದೇಶನಕ್ಕನುಗುಣವಾಗಿ ಹಾಜರಾಗಿ ಹೇಳಿಕೆ ನೀಡಿದ್ದು, (ಇದನ್ನು Annexure E ಎಂದು ಗುರುತಿಸಲಾಗಿದೆ) ಸದರಿ ಹೇಳಿಕೆ ಈ ಮುಂದಿನಂತಿದೆ, ಅಂದರೆ,–

"ನನ್ನ ಹೆಸರು ಎಲ್.ಆರ್ ಈಶ್ವರಯ್ಯ, ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕು. ನನ್ನ ವಯಸ್ಸು 53 ವರ್ಷ, ಆಗಿರುತ್ತದೆ. ನಾನು ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ.

ನಾನು ಗುಳ್ಳದಮನೆ ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ದಿನಾಂಕ:16-04-2021ರಂದು ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಹಾಲಿ ಸುಣ್ಣದಹಳ್ಳಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಬಿ. ಮಂಜಪ್ಪ ಇವರು ದಿನಾಂಕ:27-05-2021ರಂದು ನನಗೆ ಕಛೇರಿಯ ಚಾರ್ಜನ್ನು ಕೊಟ್ಟಿರುತ್ತಾರೆ. ಅಲ್ಲಿಂದ ಇಲ್ಲಿಯವರೆಗೂ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಅವಧಿಯಲ್ಲಿ ದೂರುದಾರರಾದ ಶ್ರೀ ಜಿ.ಯು. ತಿಮ್ಮಪ್ಪ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮರವರ ದೂರಿನಂತೆ ಗ್ರಾಮ ಪಂಚಾಯಿತಿಯಲ್ಲಿ ಮೂರು ಅಸೆಸ್‌ಮೆಂಟ್ ಪುಸ್ತಕಗಳಿದ್ದು, ಅದರಲ್ಲಿ ಅಸೆಸ್‌ಮೆಂಟ್ ಪುಸ್ತಕ-1ರಲ್ಲಿ 1998-99ನೇ ಸಾಲಿನ ಅಸೆಸ್‌ಮೆಂಟ್ ಪುಸ್ತಕದ ಪುಟ ಸಂಖ್ಯೆ.38ರಲ್ಲಿ ಅಸೆಸ್‌ಮೆಂಟ್ ಸಂಖ್ಯೆ.10ರಲ್ಲಿನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಅಸೆಸ್‌ಮೆಂಟ್ ಸಂಖ್ಯೆ.10ರ ನಂತರ 11 ಬರಬೇಕಾಗಿದ್ದು, ಅದರ ಮಧ್ಯದಲ್ಲಿ 10/10 ಎಂದು ನಮೂದಿಸಿ ಶ್ರೀ ಜಿ.ಯು. ಲಕ್ಷ್ಮಣಗೌಡ ಬಿನ್ ಲೇಟ್ ಉಗ್ರಪ್ಪರವರ ಹೆಸರಿಗೆ 44*12 ಹಂಚಿನ ಮನೆ 83*19 ಹಿತ್ತಲು ಜಾಗ ಎಂದು ನಮೂದಿಸಲಾಗಿರುತ್ತದೆ. ನಂತರ ಅಸೆಸ್‌ಮೆಂಟ್ ಸಂಖ್ಯೆ 10/10ಎ ನಲ್ಲಿ ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪ ಎಂದು ನಮೂದಾಗಿದ್ದು, ಜಿ.ಯು ತಿಮ್ಮಪ್ಪ ಎಂದು ನಮೂದಾಗಿರುವ ಹೆಸರಿನ ಮೇಲೆ ಜಿ.ಯು ಲಕ್ಷ್ಮಣಗೌಡ ಎಂದು ಬಿಳಿ ಇಂಕನ್ನು ಹಾಕಿ ತಿದ್ದುಪಡಿ ಮಾಡಿ ಜಿ.ಯು ಲಕ್ಷ್ಮಣ್‌ಗೌಡ ಬಿನ್ ಉಗ್ರಪ್ಪರವರ ಹೆಸರಿಗೆ 36*27 ಮನೆ 85*40 ಹಿತ್ತಲು ಎಂದು ನಮೂದಿಸಲಾಗಿದೆ. ನಂತರ ಅಸೆಸ್‌ಮೆಂಟ್ ಸಂಖ್ಯೆ 10/1ರಲ್ಲಿ ಜಿ.ಯು. ಸಿದ್ದಪ್ಪ ಬಿನ್ ಉಗ್ರಪ್ಪರವರ ಹೆಸರಿಗೆ 34*14 ಮಿಲ್‌ಮನೆ ಎಂದು ನಮೂದಿಸಲಾಗಿರುತ್ತದೆ.

ಅಸೆಸ್‌ಮೆಂಟ್ ಪುಸ್ತಕ-2ರಲ್ಲಿ ಅಸೆಸ್‌ಮೆಂಟ್ ಸಂಖ್ಯೆ.10ರಲ್ಲಿ ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪರವರ ಹೆಸರಿಗೆ 36*27 ಮನೆ 85*40 ಹಿತ್ತಲು, 10/1ರಲ್ಲಿ ಜಿ.ಯು ಸಿದ್ದಪ್ಪ ಬಿನ್ ಉಗ್ರಪ್ಪರವರ ಹೆಸರಿಗೆ 34*14 ಮಿಷನ್‌ಮನೆ ಎಂದು ನಮೂದಿಸಲಾಗಿರುತ್ತದೆ.

ಅಸೆಸ್‌ಮೆಂಟ್ ಪುಸ್ತಕ-3ರಲ್ಲಿ ಅಸೆಸ್‌ಮೆಂಟ್ ಸಂಖ್ಯೆ.10ರಲ್ಲಿ ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪ 27*36 ಮನೆ ಮಾತ್ರ ನಮೂದಾಗಿದ್ದು, ಹಿತ್ತಲು ಜಾಗ ನಮೂದಾಗಿರುವುದಿಲ್ಲ. ಅಸೆಸ್‌ಮೆಂಟ್ ಸಂಖ್ಯೆ 10/ಎ ನಲ್ಲಿ ಜಿ.ಯ ಸಿದ್ದಪ್ಪ ಬಿನ್ ಉಗ್ರಪ್ಪರವರ ಹೆಸರಿಗೆ 40*85 ಹಿತ್ತಲು ಜಾಗ ಎಂದು ನಮೂದಿಸಲಾಗಿರುತ್ತದೆ. ಹಾಗೂ ಅಸೆಸ್‌ಮೆಂಟ್ ಸಂಖ್ಯೆ 10/ಬಿ ನಲ್ಲಿ ಜಿ.ಯು ಸಿದ್ದಪ್ಪ ಬಿನ್ ಉಗ್ರಪ್ಪರವರ ಹೆಸರಿಗೆ 14*34 ಮಿಷನ್ ಮನೆ ಎಂದು ನಮೂದಿಸಲಾಗಿದ್ದು, ಅಸೆಸ್‌ಮೆಂಟ್ ಪುಸ್ತಕ 01, 02 ಮತ್ತು 03ಕ್ಕೆ ತಾಳೆ ಇರುವುದಿಲ್ಲ. ಹಾಗೂ ಅಸೆಸ್‌ಮೆಂಟ್ ಪುಸ್ತಕ 01ರಲ್ಲಿ ಬಿಳಿ ಇಂಕು ಹಾಕಿ ಜಿ.ಯು ತಿಮ್ಮಪ್ಪರವರ ಹೆಸರಿನ ಮೇಲೆ ಜಿ.ಯ ಲಕ್ಷ್ಮಣಗೌಡ ಎಂದು ತಿದ್ದುಪಡಿ ಮಾಡಿರುವುದನ್ನು ನನ್ನ ಅವಧಿಯಲ್ಲಿ ಮಾಡಿರುವುದಿಲ್ಲ. ಇದನ್ನು ಹಾಲಿ ಸುಣ್ಣದಹಳ್ಳಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಬಿ. ಮಂಜಪ್ಪರವರು ತಿದ್ದುಪಡಿ ಮಾಡಿರುತ್ತಾರೆ. ಹಾಗೂ ಅಸೆಸ್‌ಮೆಂಟ್

ಪುಸ್ತಕ 02 ಮತ್ತು 03ನೇ ಪುಸ್ತಕವನ್ನು 2008-09 ಮತ್ತು 10ನೇ ಸಾಲಿನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ ಎಲ್.ಎನ್ ಭದ್ರಾಚಾರ್ (ಹಾಲಿ ತರೀಕೆರೆ ತಾಲ್ಲೂಕಿನ ಗೋಪಾಲ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿ) ರವರು ಮೌಖಿಕವಾಗಿ ತಿಳಿಸಿರುವಂತೆ ಹಾಲಿ ಗ್ರಾಮ ಪಂಚಾಯಿತಿಯಲ್ಲಿ ಕರವಸೂಲಿಗಾರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಶಿವಮೂರ್ತಿಯವರು ಬರೆದಿರುತ್ತೇನೆಂದು ನನಗೆ ಮೌಖಿಕವಾಗಿ ತಿಳಿಸಿರುತ್ತಾರೆ. ಅದರಂತೆ ಪ್ರಾಧಿಕಾರಿಗಳ ಸಮ್ಮುಖದಲ್ಲಿ ಈ ಮೂಲಕ ನನ್ನ ಹೇಳಿಕೆಯನ್ನು ನೀಡಿರುತ್ತೇನೆ."

ದಿ:03-03-2022ರಂದು ಪ್ರಾಧಿಕಾರವು, ಸದರಿ ದೂರಿಗೆ ಸಂಬಂಧಿಸಿದಂತೆ ಶ್ರೀ ಸಿ. ಶಿವಮೂರ್ತಿ, ಕರವಸೂಲಿಗಾರರು, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರಿಗೆ ನೋಟೀಸ್ ಜಾರಿ ಮಾಡಿ ಅಸೆಸ್‌ಮೆಂಟ್ ಪುಸ್ತಕ 02 ಮತ್ತು 03ನೇ ಪುಸ್ತಕವನ್ನು 2008-09 ಮತ್ತು 10ನೇ ಸಾಲಿನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ ಎಲ್.ಎನ್ ಭದ್ರಾಚಾರ್‌ರವರು ಮೌಖಿಕವಾಗಿ ತಿಳಿಸಿರುವಂತೆ ಹಾಲಿ ಗ್ರಾಮ ಪಂಚಾಯಿತಿಯಲ್ಲಿ ಕರವಸೂಲಿಗಾರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಶಿವಮೂರ್ತಿಯವರು ಬರೆದಿರುತ್ತೇನೆಂದು ನನಗೆ ಮೌಖಿಕವಾಗಿ ತಿಳಿಸಿರುತ್ತಾರೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರು ಪ್ರಾಧಿಕಾರಕ್ಕೆ ಹೇಳಿಕೆಯನ್ನು ನೀಡಿರುವುದರಿಂದ ಸದರಿ ದೂರಿಗೆ ಸಂಬಂಧಿಸಿದಂತೆ ದಿ:08-03-2022ರಂದು ಬೆಳಿಗ್ಗೆ 11-30 ಗಂಟೆಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಹೇಳಿಕೆಯನ್ನು ನೀಡಲು ಸೂಚಿಸಲಾಗಿತ್ತು. (ಇದನ್ನು Annexure F ಎಂದು ಗುರುತಿಸಲಾಗಿದೆ)

ಅದರಂತೆ ಶ್ರೀ ಮಂಜಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಲಿ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿಯವರು ಮತ್ತು ಶ್ರೀ ಸಿ. ಶಿವಮೂರ್ತಿ, ಕರವಸೂಲಿಗಾರರು, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರು ದಿನಾಂಕ:08-03-2022ರಂದು ಬೆಳಿಗ್ಗೆ 11-30 ಗಂಟೆಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಗುಳ್ಳದಮನೆ ಗ್ರಾಮ ಪಂಚಾಯಿತಿಯ ಖಾತೆ ನಂ.10/10ರ ದೂರಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳ ಪರಿಶೀಲನೆ, ಸ್ಥಳ ಪರಿಶೀಲನೆ ಮತ್ತು ಖಾತೆದಾರರುಗಳ ಹೇಳಿಕೆಯನ್ನು ಪಡೆದು ಪ್ರಾಧಿಕಾರಕ್ಕೆ ಸೂಕ್ತವಾದ ಮಾಹಿತಿಯನ್ನು ನೀಡಲು 10 ದಿವಸಗಳ ಕಾಲವಕಾಶವನ್ನು ನೀಡಬೇಕೆಂದು ಪತ್ರ ಮುಖೇನ ಕೋರಿ ದಿನಾಂಕ:22-03-2022ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಈ ಕೆಳಕಂಡಂತೆ ಹೇಳಿಕೆಯನ್ನು ನೀಡಿದ್ದು (ಇದನ್ನು Annexure G ಎಂದು ಗುರುತಿಸಲಾಗಿದೆ) ಸದರಿ ಹೇಳಿಕೆ ಈ ಮುಂದಿನಂತಿದೆ, ಅಂದರೆ,-

"ನನ್ನ ಹೆಸರು ಬಿ. ಮಂಜಪ್ಪ, ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕು. ನನ್ನ ವಯಸ್ಸು 48 ವರ್ಷ, ಆಗಿರುತ್ತದೆ. ನಾನು ತರೀಕೆರೆಯಲ್ಲಿ ವಾಸವಾಗಿದ್ದೇನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು 2016-17ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಗುಳ್ಳದಮನೆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಸಮಯದಲ್ಲಿ ದಿ:12-03-2020ರಂದು ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪರವರು ದಿನಾಂಕ:21-09-2000ರಂದು ತರೀಕೆರೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟ ಪಾಲುಪಾರಿಕತ್ತು ರಿಜಿಸ್ಟರ್ ದಾಖಲೆಯನ್ನು ಅಡಕವಿರಿಸಿ ನನ್ನ ಹೆಸರಿಗೆ ಬರಬೇಕಾದ ಮನೆ ಮತ್ತು ಹಿತ್ತಲು ಜಾಗವನ್ನು ನನ್ನ ಹೆಸರಿಗೆ ಖಾತೆ ವರ್ಗಾಹಿಸಿಕೊಡುವಂತೆ ಕೋರಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ಪತ್ರದಂತೆ ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪರವರಿಗೆ ಖಾತೆ ದಾಖಲು ಮಾಡುವ ಸಮಯದಲ್ಲಿ ಖಾತೆದಾರರ ನೊಂದಣಿ ಪತ್ರದ ಜೆರಾಕ್ಸ್ ಪ್ರತಿಯಲ್ಲಿರುವಂತೆ ಖಾತೆ ನಂ.10ರಲ್ಲಿ 44*24 ಅಡಿ ವಿಸ್ತೀರ್ಣದ ಮನೆಯ ಜಾಗದಲ್ಲಿ 44*12 ಅಡಿ ಹಾಗೂ ಹಿತ್ತಲು ಜಾಗ 83*38 ಅಡಿ ವಿಸ್ತೀರ್ಣದಲ್ಲಿ 83*19 ಅಡಿ ಎಂಬುದಾಗಿ ಖಾತಾ ಪುಸ್ತಕದಲ್ಲಿ ದಾಖಲು ಮಾಡಿರುತ್ತೇನೆ. ಸದರಿ ದಾಖಲೆ ಮಾಡಿರುವ ವಿಸ್ತೀರ್ಣವು ಮೂಲ ಖಾತಾ ಪುಸ್ತಕದಲ್ಲಿ ಮೇಲ್ಕಂಡ ವಿಸ್ತೀರ್ಣದಲ್ಲಿ ಅಳತೆಯಲ್ಲಿರುವ ವ್ಯತ್ಯಾಸವನ್ನು ಸೂಕ್ತವಾಗಿ ಪರಿಶೀಲಿಸದೇ ಖಾತಾ ಪುಸ್ತಕದಲ್ಲಿ ಮನೆಯ ವಿಸ್ತೀರ್ಣ 36*27 ಅಡಿ ಹಾಗೂ ಹಿತ್ತಲು ವಿಸ್ತೀರ್ಣ 85*40 ಎಂಬುದಾಗಿದ್ದು, ಈ ಅಳತೆಯಲ್ಲಿ ಕ್ರಮವಾಗಿ ಎರಡು ಭಾಗಗಳಾಗಿ ಅಂದರೆ 36*13 1/2 ಮನೆ ಹಾಗೂ 85*20 ಎಂಬುದಾಗಿ ಖಾತೆ ದಾಖಲು ಮಾಡಬೇಕಾಗಿದ್ದು, ಖಾತಾ ಪುಸ್ತಕಕ್ಕೂ ಮತ್ತು ನೋಂದಣಿ ಪುಸ್ತಕಕ್ಕೂ ಮನೆಯ ಅಳತೆಯಲ್ಲಿ 8*3 ಅಡಿ ಹಾಗೂ ಹಿತ್ತಲಿನ ವಿಸ್ತೀರ್ಣದಲ್ಲಿ 2*2 ಅಡಿಗಳ ವ್ಯತ್ಯಾಸಗಳನ್ನು ಪರಿಶೀಲಿಸದೇ ಖಾತೆಯನ್ನು ದಾಖಲು ಮಾಡಿರುತ್ತೇನೆ. ಈ ಮೇಲ್ಕಂಡ ಹೇಳಿಕೆಗೆ ಸಂಬಂಧಿಸಿದಂತೆ ನಾನು ಎರಡು ಪಂಚಾಯಿತಿಯ ಕೆಲಸಕಾರ್ಯಗಳ ಒತ್ತಡದಿಂದ (ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ ಹೆಚ್ಚಿನ ಪ್ರಭಾರ) ಖಾತೆ ದಾಖಲು ಮಾಡಿರುತ್ತೇನೆ. ಹಾಗೂ ದೂರುದಾರರು ಗ್ರಾಮ ಪಂಚಾಯಿತಿಯಲ್ಲಿ ಮೂರು ಅಸೆಸ್‌ಮೆಂಟ್ ವಹಿಗಳಿದ್ದು, ಎರಡು ವಹಿಗಳಲ್ಲಿ ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪನವರ ಹೆಸರು ನಮೂದಾಗಿದ್ದು, ಒಂದು ಪುಸ್ತಕದಲ್ಲಿ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪ ಎಂಬ ಹೆಸರನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ದಾಖಲಿಸಿರುವುದಾಗಿ ತಿಳಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಲ್ಲಿ ಹೆಚ್ಚಿಗೆ ಚಾಲ್ತಿಯಲ್ಲಿದ್ದ 1998-99ನೇ ಸಾಲಿನ ಅಸೆಸ್‌ಮೆಂಟ್ ಪುಸ್ತಕದಲ್ಲಿ ದಾಖಲಿಸಲಾಗಿದ್ದು, ಇನ್ನೆರಡು ಅಸೆಸ್‌ಮೆಂಟ್ ವಹಿಗಳಿರುವುದು ನನ್ನ ಗಮನದಲ್ಲಿರುವುದಿಲ್ಲ. ಆದಕಾರಣದಿಂದ ಅಸೆಸ್‌ಮೆಂಟ್ ಪುಸ್ತಕ 1998-99ರಲ್ಲಿರುವಂತೆ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪರವರಿಗೆ ಮೂಲ ಖಾತಾ ದಾಖಲು ಪುಸ್ತಕಗಳಂತೆ ಮನೆಯ ಹಾಗೂ ಹಿತ್ತಲು ವಿಸ್ತೀರ್ಣದಲ್ಲಿ ಖಾತೆ ದಾಖಲು ಮಾಡಲು ನನ್ನಿಂದ ತಪ್ಪಾಗಿರುತ್ತದೆ ಎಂದು ಈ ಮೂಲಕ ನನ್ನ ಹೇಳಿಕೆಯನ್ನು ನೀಡಿರುತ್ತೇನೆ."

"ನನ್ನ ಹೆಸರು ಸಿ. ಶಿವಮೂರ್ತಿ, ಕರವಸೂಲಿಗಾರ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕು. ನನ್ನ ವಯಸ್ಸು 52 ವರ್ಷ, ಆಗಿರುತ್ತದೆ. ನಾನು ತರೀಕೆರೆ ತಾಲ್ಲೂಕಿನ ಗುಳ್ಳದಮನೆ ಗ್ರಾಮದಲ್ಲಿ ವಾಸವಾಗಿದ್ದೇನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು 2007–08ನೇ ಸಾಲಿನಿಂದ ಪ್ರಸ್ತುತದವರೆಗೆ ಕರವಸೂಲಿಗಾರರಾಗಿ ಗುಳ್ಳದಮನೆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪನವರ ಹೆಸರಿನಲ್ಲಿ ಅಸೆಸ್‌ಮೆಂಟ್ 10/10ರಲ್ಲಿ 36*27 ಅಡಿ ಮನೆ, 85*40 ಅಡಿ ಹಿತ್ತಲು ಇದ್ದು, ಸದರಿ ವಿಸ್ತೀರ್ಣದ ಮನೆ ಮತ್ತು ಹಿತ್ತಲು ಜಾಗವನ್ನು ಅವರ ತಮ್ಮನಾದ ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪರವರಿಗೆ ಹಿಸ್ಸೆ ಬರಬೇಕಾಗಿದ್ದು, ದಿನಾಂಕ:21–09–2000ರಂದು ತರೀಕೆರೆ ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟ ಪಾಲುಪಾರಿಕತ್ತು ರಿಜಿಸ್ಟರ್ ದಾಖಲೆಯನ್ನು ಅಡಕವಿರಿಸಿ ನನ್ನ ಹೆಸರಿಗೆ ಬರಬೇಕಾದ ಮನೆ ಮತ್ತು ಹಿತ್ತಲು ಜಾಗವನ್ನು ನನ್ನ ಹೆಸರಿಗೆ ಖಾತೆ ವರ್ಗಾಹಿಸಿಕೊಡುವಂತೆ ಕೋರಿ ದಿನಾಂಕ:09–03–2020ರಂದು ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿರುತ್ತಾರೆ. ಸದರಿ ಪತ್ರವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿದ್ದ ಶ್ರೀ ಬಿ. ಮಂಜಪ್ಪರವರಿಗೆ ಖಾತೆದಾರರ ಮನವಿ ಪತ್ರವನ್ನು ಗಮನಕ್ಕೆ ತಂದು ಅವರ ವಶಕ್ಕೆ ನೀಡಿರುತ್ತೇನೆ. ಅದರಂತೆ ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪನವರಿಗೆ ಗ್ರಾಮ ಪಂಚಾಯಿತಿ ಅಸೆಸ್‌ಮೆಂಟ್ ಖಾತಾ ಪುಸ್ತಕದಲ್ಲಿ ದಾಖಲಾಗಿರುವ ಅಳತೆಯಂತೆ 36*27 ಅಡಿಯ ಮನೆಯಲ್ಲಿ ಅರ್ಧಭಾಗ ಅಂದರೆ 36*13 1/2 ಮತ್ತು 85*40 ಅಡಿ ಹಿತ್ತಲು ಜಾಗದಲ್ಲಿ ಅರ್ಧಭಾಗ 85*20 ಅಡಿಗಳ ಜಾಗವನ್ನು ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪ ಹಾಗು ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪರವರಿಗೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಮಂಜಪ್ಪರವರು ಖಾತೆ ಬದಲಾವಣೆ ಮಾಡಿ ಅಸೆಸ್‌ಮೆಂಟ್ ಪುಸ್ತಕದಲ್ಲಿ ದಾಖಲು ಮಾಡಿರುತ್ತಾರೆಂದು ಪ್ರಾಧಿಕಾರದ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ."

ದಿನಾಂಕ:28–03–2022ರಂದು ಪ್ರಾಧಿಕಾರವು, ದೂರುದಾರರಾದ ಶ್ರೀ ಜಿ.ಯು ತಿಮ್ಮಪ್ಪ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕುರವರಿಗೆ ಪತ್ರ ಬರೆದು ಸದರಿ ದೂರಿಗೆ ಸಂಬಂಧಿಸಿದಂತೆ ಹಿಂದಿನ ಗುಳ್ಳದಮನೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಿ. ಮಂಜಪ್ಪ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕು ಹಾಗೂ ಶ್ರೀ ಸಿ. ಶಿವಮೂರ್ತಿ, ಕರವಸೂಲಿಗಾರ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರಿಗೆ ದಿನಾಂಕ:24–02–2022ರಂದು ದೂರಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ಮುಂದೆ ಹಾಜರಾಗಿ ಹೇಳಿಕೆ ನೀಡಲು ನೋಟೀಸ್ ಜಾರಿ ಮಾಡಲಾಗಿತ್ತು. ಅದರಂತೆ ಹಿಂದಿನ ಗುಳ್ಳದಮನೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಿ. ಮಂಜಪ್ಪ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕು ಹಾಗೂ ಶ್ರೀ ಸಿ. ಶಿವಮೂರ್ತಿ, ಕರವಸೂಲಿಗಾರ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರು ದಿನಾಂಕ:22–03–2022ರಂದು ದೂರಿಗೆ ಸಂಬಂಧಿಸಿದಂತೆ ಪ್ರಾದಿಕಾರದ ಮುಂದೆ ಹಾಜರಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಆದ್ದರಿಂದ ಹಿಂದಿನ ಗುಳ್ಳದಮನೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಿ. ಮಂಜಪ್ಪ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕು ಹಾಗೂ ಶ್ರೀ ಸಿ. ಶಿವಮೂರ್ತಿ, ಕರವಸೂಲಿಗಾರ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರು ನೀಡಿರುವ ಹೇಳಿಕೆಯನ್ನು ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿ ಆಕ್ಷೇಪಣೆ ಇದ್ದರೆ ದಾಖಲಾತಿಗಳೊಂದಿಗೆ ದಿನಾಂಕ:05–04–2022ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಹೇಳಿಕೆ ನೀಡಲು ತಿಳಿಸಲಾಗಿತ್ತು. (ಇದನ್ನು Annexure H ಎಂದು ಗುರುತಿಸಲಾಗಿದೆ)

ಅದರಂತೆ ದೂರುದಾರರಾದ ಶ್ರೀ ಜಿ.ಯು ತಿಮ್ಮಪ್ಪ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕುರವರು ದಿನಾಂಕ:18-04-2022ರಂದು ಬೆಳಿಗ್ಗೆ 11:30 ಗಂಟೆಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಈ ಕೆಳಕಂಡಂತೆ ಹೇಳಿಕೆಯನ್ನು ನೀಡಿದ್ದು, (ಇದನ್ನು Annexure I ಎಂದು ಗುರುತಿಸಲಾಗಿದೆ) ಸದರಿ ಹೇಳಿಕೆ ಈ ಮುಂದಿನಂತಿದೆ, ಅಂದರೆ,-

> "ನನ್ನ ಹೆಸರು ಜಿ.ಯು ತಿಮ್ಮಪ್ಪ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕು. ನನ್ನ ವಯಸ್ಸು 69 ವರ್ಷ, ಆಗಿರುತ್ತದೆ. ನಾನು ತರೀಕೆರೆ ತಾಲ್ಲೂಕಿನ ಗುಳ್ಳದಮನೆ ಗ್ರಾಮದಲ್ಲಿ ವಾಸವಾಗಿದ್ದೇನೆ.
>
> ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಖಾನೇಷುಮಾರಿ ನಂಬರ್.52ರಲ್ಲಿ ನಮ್ಮ ತಂದೆಯವರಾದ ಉಗ್ರಪ್ಪರವರ ಹೆಸರಿನಲ್ಲಿ ಮುಂಭಾಗ 25*39 ಅಡಿಗಳು ಇದ್ದು, ಹಿಂಭಾಗದಲ್ಲಿ 42*83 ಇರುತ್ತದೆ. ಅದರಲ್ಲಿ 1977ರ ವಿಭಾಗದಂತೆ ನನಗೆ ಮನೆ ಮುಂಭಾಗ ಪೂರ್ವ-ಪಶ್ಚಿಮ 12 1/2*39 ಅಡಿಗಳು ಮತ್ತು ಹಿಂಭಾಗದ ಹಿತ್ತಲು 21*83 ಅಡಿಗಳು ವಿಭಾಗ ಮಾಡಿಕೊಟ್ಟಿರುತ್ತದೆ. ಅದರಂತೆ ನನ್ನ ದಾಖಲಾತಿಗಳು ಪಂಚಾಯಿತಿ ಯಲ್ಲಿ ದಾಖಲೆ ಇರುತ್ತದೆ. ಅದರಲ್ಲಿ ಎರಡು ಅಸೆಸ್‌ಮೆಂಟ್ ಪುಸ್ತಕದಲ್ಲಿ ನನ್ನ ಹೆಸರಿದ್ದು, ಮೂರನೇ ಅಸೆಸ್‌ಮೆಂಟ್ ಪುಸ್ತಕದಲ್ಲಿ ನನ್ನ ಹೆಸರಿನ ಮೇಲೆ ಬಿಳಿ ಇಂಕು ಬಳಿಸಿ ತಿದ್ದುಪಡಿ ಮಾಡಿ ಲಕ್ಷ್ಮಣಗೌಡ ಎಂಬ ಹೆಸರನ್ನು ಸೇರಿಸಿರುತ್ತಾರೆ. ಶ್ರೀ ಮಂಜಪ್ಪ ಅಂದಿನ ಪಂಚಾಯಿತಿ ಅಬಿವೃದ್ಧಿ ಅಧಿಕಾರಿ ಮತ್ತು ಜಿ.ಯು ಲಕ್ಷ್ಮಣಗೌಡರವರು ಉದ್ದೇಶ ಪೂರ್ವಕವಾಗಿ ನನ್ನ ಆಸ್ತಿಯನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಬಿಳಿ ಇಂಕು ಬಳಸಿ ತಿದ್ದುಪಡಿ ಮಾಡಿರುತ್ತಾರೆ. ಇವರ ಬಗ್ಗೆ ಕಾನೂನು ಕ್ರಮ ತೆಗೆದುಕೊಂಡು ನನ್ನ ದಾಖಲಾತಿಗಳನ್ನು ಸರಿಪಡಿಸಿಕೊಡಬೇಕಾಗಿ ಕೋರಿಕೊಳ್ಳುತ್ತೇನೆ. ಮತ್ತು ಈ ಪಂಚಾಯಿತಿಯಲ್ಲಿ ಬಹಳಷ್ಟು ಅಕ್ರಮ ವ್ಯವಹಾರಗಳು ನಡೆದಿರುತ್ತದೆ. ಇದನ್ನು ಸರಿಪಡಿಸಿ ಅಲ್ಲಿನ ಜನತೆಗೆ ನ್ಯಾಯದೊರಕಿಸಿಕೊಡಬೇಕೆಂದು ಪ್ರಾಧಿಕಾರದ ಮುಂದೆ ಈ ಮೂಲಕ ಹೇಳಿಕೆಯನ್ನು ನೀಡಿರುತ್ತೇನೆ.
>
> **ಲಗತ್ತು:** ನನ್ನ ಆಸ್ತಿಗೆ ಸಂಬಂಧಿಸಿದ ವಿಭಾಗ ಪತ್ರವನ್ನು ಲಗತ್ತಿಸಿರುತ್ತೇನೆ."

ದಿನಾಂಕ:18-04-2022ರಂದು ದೂರುದಾರರಾದ ಶ್ರೀ ಜಿ.ಯು ತಿಮ್ಮಪ್ಪ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕುರವರಿಗೆ ಪುನಃ ಪ್ರಾಧಿಕಾರದಿಂದ ನೋಟೀಸ್ ಜಾರಿ ಮಾಡಿ ದಿನಾಂಕ:18-04-2022ರಂದು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ನೀಡಿರುವ ಹೇಳಿಕೆಯನ್ನು ಪರಿಶೀಲಿಸಲಾಗಿದೆ. ಸದರಿ ಹೇಳಿಕೆಯಲ್ಲಿ ಅಪೂರ್ಣವಾದ ವಿಭಾಗ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದ್ದು, ಸದರಿ ಪ್ರತಿಯಲ್ಲಿ ತಮ್ಮ ಕುಟುಂಬ ಸದಸ್ಯರುಗಳ ಸಹಿ ಇರುವ ಕೊನೆಯ ಪುಟದ ಪ್ರತಿ ಇರುವುದಿಲ್ಲ. ಆದ್ದರಿಂದ ಸದರಿ ವಿಭಾಗ ಪತ್ರದ ಎಲ್ಲಾ ಪುಟಗಳಿರುವ ದೃಢೀಕೃತ ಪ್ರತಿಯನ್ನು ದಿನಾಂಕ:30-04-2022 ರೊಳಗಾಗಿ ಪ್ರಾಧಿಕಾರಕ್ಕೆ ಸಲ್ಲಿಸಲು ತಿಳಿಸಲಾಗಿತ್ತು. (ಇದನ್ನು Annexure J ಎಂದು ಗುರುತಿಸಲಾಗಿದೆ)

ದಿನಾಂಕ:18-04-2022ರಂದು ಎದುರುದಾರರಾದ ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕುರವರಿಗೆ ಪ್ರಾಧಿಕಾರದಿಂದ ನೋಟೀಸ್ ಜಾರಿ ಮಾಡಿ ಸದರಿ ದೂರಿಗೆ ಸಂಬಂಧಿಸಿದಂತೆ, ಸದರಿ ಆಸ್ತಿಯನ್ನು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಖಾತೆ ಮಾಡಲಾಗಿದ್ದು, ಯಾವ ಆಧಾರದ ಮೇಲೆ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಲಾಗಿದೆ ಎಂಬುದರ ಬಗ್ಗೆ ಸಂಬಂಧಪಟ್ಟ ಕ್ರಯಪತ್ರ, ವಿಭಾಗ ಪತ್ರ ಅಥವಾ ಇತರೆ ಮೂಲದಿಂದ ಬಂದಂತಹ ಮೂಲ ಪತ್ರಗಳ ಪ್ರತಿಯನ್ನು ಅಥವಾ ಸದರಿ ಪತ್ರಗಳ ದೃಢೀಕೃತ ಪ್ರತಿಗಳನ್ನು ದಿ:30-04-2022 ರೊಳಗಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ಹಾಜರುಪಡಿಸಲು ತಿಳಿಯಪಡಿಸಿದೆ. ಇಲ್ಲವಾದಲ್ಲಿ ತಮ್ಮ ಹೆಸರಿಗೆ ನಮೂದಾಗಿರುವ ಖಾತೆಯನ್ನು ರದ್ದುಪಡಿಸಲು ಕ್ರಮವಹಿಸಲಾಗುವುದೆಂದು ತಿಳಿಯುವುದು ಎಂದು ತಿಳಿಸಲಾಗಿತ್ತು. (ಇದನ್ನು Annexure K ಎಂದು ಗುರುತಿಸಲಾಗಿದೆ)

ಅದರಂತೆ ದಿನಾಂಕ:22-04-2022ರಂದು ಎದುರುದಾರರಾದ ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಲೇಟ್ ಹೆಚ್. ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕುರವರು ದೂರಿಗೆ ಸಂಬಂಧಿಸಿದಂತೆ, ಗುಳ್ಳದಮನೆ ಗ್ರಾಮ ಪಂಚಾಯಿತಿಯಲ್ಲಿ ಅಸೆಸ್‌ಮೆಂಟ್ ನಂ.10ರಲ್ಲಿರುವ ಸ್ವತ್ತನ್ನು ನನ್ನ ಭಾಗಕ್ಕೆ ಬಂದಿದ್ದು ಸ್ವತ್ತನ್ನು ಖಾತೆ ದಾಖಲು ಮಾಡಿಸಲು ಗ್ರಾಮ ಪಂಚಾಯಿತಿಗೆ ನೋಂದಣಿ ವಿಭಾಗ ಪತ್ರದೊದಿಗೆ ಅರ್ಜಿಯನ್ನು ಸಲ್ಲಿಸಿದ್ದು ಗ್ರಾಮ ಪಂಚಾಯಿತಿಯಿಂದ ಖಾತೆ ಮಾಡಿರುತ್ತಾರೆ. ನಾನು ಬೇರೆ ಯಾರದೋ ಸ್ವತ್ತನ್ನು ಖಾತೆ ದಾಖಲು ಮಾಡಿಸಿಕೊಂಡಿರುವುದಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಜಿ.ಯು ತಿಮ್ಮಪ್ಪ ಬಿನ್ ಲೇಟ್ ಉಗ್ರಪ್ಪ ಹೆಸರಿಗೆ ಬಿಳಿ ಇಂಕನ್ನು ಹಚ್ಚಿ ನನ್ನ ಹೆಸರು ನಮೂದಿಸಿರುವುದಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಅಂದು ಕಾರ್ಯನಿರ್ವಹಿಸುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರು ಮಾಡಿರುವ ತಪ್ಪು, ಇದರಲ್ಲಿ ಬೇರೆಯವರ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಲು ಯಾರಿಗೂ ತಿಳಿಸಿರುವುದಿಲ್ಲ ಮತ್ತು ಅರ್ಜಿಯನ್ನು ಸಹ ಕೊಟ್ಟಿರುವುದಿಲ್ಲ. ದೂರುದಾರರು ನನ್ನ ಮೇಲೆ ದೂರಿರುವುದು ಸತ್ಯಕ್ಕೆ ದೂರವಾದ ಅಂಶವಾಗಿರುತ್ತದೆ. ನನ್ನ ಭಾಗಕ್ಕೆ ಬಂದಿರುವ ಸ್ವತ್ತನ್ನು ಮಾತ್ರ ನನ್ನ ಹೆಸರಿಗೆ ಖಾತೆ ದಾಖಲು ಮಾಡಿಕೊಡುವಂತೆ ಅರ್ಜಿ ಸಲ್ಲಿಸಿರುತ್ತೇನೆ. ಅದರಂತೆ ಖಾತೆ ದಾಖಲಿಸಿರುತ್ತಾರೆ. ಆದ್ದರಿಂದ ಇದರಂತೆ ನನ್ನ ಭಾಗಕ್ಕೆ ಬಂದಿರುವ ಸ್ವತ್ತಿನ ವಿಭಾಗಪತ್ರದ ನಕಲನ್ನು ಮತ್ತು ಕಂದಾಯ ರಶೀದಿ ನಕಲನ್ನು ಲಗತ್ತಿಸಿರುತ್ತೇನೆ ಎಂದು ಪ್ರಾಧಿಕಾರಕ್ಕೆ ಪತ್ರ ಬರೆದಿರುತ್ತಾರೆ. (ಇದನ್ನು Annexure L ಎಂದು ಗುರುತಿಸಲಾಗಿದೆ)

ಮೇಲ್ಕಂಡ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಉಪಬಂಧಗಳು, ನಿಯಮಗಳು, ದೂರುದಾರರ ದೂರಿನಲ್ಲಿಯ ಅಂಶಗಳು ಮತ್ತು ಹೇಳಿಕೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರ ವರದಿ ಮತ್ತು ಹೇಳಿಕೆ, ಶ್ರೀ ಬಿ. ಮಂಜಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಾಲಿ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ, ಶ್ರೀ ಸಿ. ಶಿವಮೂರ್ತಿ, ಕರವಸೂಲಿಗಾರ, ಗುಳ್ಳದಮನೆ, ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರ ಹೇಳಿಕೆಗಳೆಲ್ಲನ್ನು ಪರಿಗಣಿಸಿ ಪ್ರಾಧಿಕಾರವು ಕೆಳಕಂಡ ಆದೇಶವನ್ನು ಹೊರಡಿಸಿದೆ. ಅಂದರೆ,-

## –:ಆದೇಶ:–

ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಿ. ಮಂಜಪ್ಪ ಇವರು ತಮ್ಮ ಹೇಳಿಕೆಯಲ್ಲಿ ದೂರುದಾರರು ದಿನಾಂಕ:12–03–2020ರಂದು ವಿಭಾಗ ಪತ್ರದ ದಾಖಲೆಯನ್ನು ಅಡಕವಿರಿಸಿ ನನಗೆ ಬರಬೇಕಾದ ಮನೆ ಮತ್ತು ಹಿತ್ತಲು ಜಾಗವನ್ನು ಖಾತೆ ಮಾಡಿಕೊಡುವಂತೆ ಕೋರಿ ಗ್ರಾಮ ಪಂಚಾಯಿತಿಗೆ ಮನವಿಯನ್ನು ಸಲ್ಲಿಸಿದ್ದು ಸದರಿ ಪತ್ರದ ಆಧಾರದ ಮೇಲೆ ಶ್ರೀ ಜಿ.ಯು ಲಕ್ಷ್ಮಣಗೌಡ ಇವರ ಹೆಸರಿಗೆ ನೊಂದಣಿ ಪತ್ರದಲ್ಲಿರುವಂತೆ ಅಸೆಸ್‌ಮೆಂಟ್ ನಂ.10ರಲ್ಲಿ 44*24 ಅಡಿ ಮನೆಯ ಜಾಗದಲ್ಲಿ ಇವರಿಗೆ ಬರಬೇಕಾದ 44*12 ಅಡಿ ಹಾಗೂ ಹಿತ್ತಲು ಜಾಗ 83*38 ಅಡಿಯಲ್ಲಿ 83*19 ಅಡಿ ಎಂಬುದಾಗಿ ಖಾತೆ ಪುಸ್ತಕದಲ್ಲಿ ದಾಖಲು ಮಾಡಿರುತ್ತೇನೆ. ಮೂಲ ಖಾತೆ ಪುಸ್ತಕದಲ್ಲಿ ದಾಖಲು ಮಾಡಿರುವ ಮನೆಯ ವಿಸ್ತೀರ್ಣದ ಅಳತೆಯನ್ನು ಖಾತಾ ಪುಸ್ತಕ ಮತ್ತು ರಿಜಿಸ್ಟರ್ ಪತ್ರವನ್ನು ಸೂಕ್ತವಾಗಿ ಪರಿಶೀಲಿಸದೆ ಖಾತಾ ಪುಸ್ತಕದಲ್ಲಿ ಮನೆಯ ಅಳತೆಯು ರಿಜಿಸ್ಟರ್ ಪತ್ರದ ದಾಖಲೆಯಂತೆ 44.24 ಅಡಿ ಇದ್ದು ಪಂಚಾಯಿತಿ ಖಾತೆ ಪುಸ್ತಕದಲ್ಲಿ 36*27 ಅಡಿಗಳಿದ್ದು ಮನೆಯ ಅಳತೆಯು 8*3 ಅಡಿಗಳು ವ್ಯತ್ಯಾಸವಾಗಿದ್ದು ಅದರಂತೆ ಹಿತ್ತಲು ಜಾಗವು ರಿಜಿಸ್ಟರ್ ಪತ್ರದ ದಾಖಲೆಯಂತೆ 83*38 ಅಡಿಗಳಿದ್ದು ಪಂಚಾಯಿತಿ ಖಾತೆ ಪುಸ್ತಕದಲ್ಲಿ 85*40 ಅಡಿಗಳು ಅಂದರೆ 2*2 ಅಡಿ ವ್ಯತ್ಯಾಸ ಮಾಡಿ ಖಾತೆ ದಾಖಲು ಮಾಡಿರುತ್ತೇನೆಂದು ಹೇಳಿಕೆ ನೀಡಿರುವುದನ್ನು ಪ್ರಾಧಿಕಾರವು ಗಮನಿಸಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಬಿ. ಮಂಜಪ್ಪ ಇವರು 1998–99ನೇ ಸಾಲಿನ ಅಸೆಸ್‌ಮೆಂಟ್ ಪುಸ್ತಕದಲ್ಲಿ, ಗುಳ್ಳದಮನೆ ಗ್ರಾಮ ಪಂಚಾಯಿತಿ ಅಸೆಸ್‌ಮೆಂಟ್ ಸಂ:10ನೇ ಪೂ–ಪ 24 ಅಡಿ, ಉ–ದ 44 ಅಡಿ ವುಳ್ಳ ಜಾಗದ ಪೈಕಿ ಪೂರ್ವ ಭಾಗದ ಪೂ–ಪ 12 ಅಡಿ, ಉ–ದ 44 ಅಡಿವುಳ್ಳ ಮನೆ ಜಾಗ ಮತ್ತು ಅದೇ ಗ್ರಾಮದ ಅಸೆಸ್‌ಮೆಂಟ್ ನಂ.10ನೇ ಪೂ–ಪ 38 ಅಡಿ, ಉ–ದ 83 ಅಡಿವುಳ್ಳ ನಿವೇಶನದ ಪೈಕಿ ಪೂರ್ವ ಭಾಗದ ಪೂ–ಪ 19 ಅಡಿ, ಉ–ದ 83 ಅಡಿವುಳ್ಳ ಹಿತ್ತಲು ಜಾಗವು ನಮೂದಾಗಿರುವ ಅಸೆಸ್ ಮೆಂಟ್ ಪುಸ್ತಕದಲ್ಲಿ ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪನವರ ಹೆಸರನ್ನು ಬಿಳಿ ಇಂಕು ಹಾಕಿ ಅಳಿಸಿ ಅದರ ಮೇಲೆ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪ ಎಂದು ಬರೆದಿರುವುದು ನಿಯಮ ಬಾಹಿರವಾದ ಕೃತ್ಯವಾಗಿರುತ್ತದೆ. ಹಾಗೂ ಗ್ರಾಮ ಪಂಚಾಯಿತಿಯಲ್ಲಿ 3 ಅಸೆಸ್‌ಮೆಂಟ್ ವಹಿಗಳಿದ್ದು 2 ಪುಸ್ತಕದಲ್ಲಿ ಶ್ರೀ ಜಿ.ಯು ತಿಮ್ಮಪ್ಪ ಬಿನ್ ಲೇ ಉಗ್ರಪ್ಪನವರ ಹೆಸರನ್ನು ನಮೂದು ಮಾಡಿ, ಒಂದು ಪುಸ್ತಕದಲ್ಲಿ ಶ್ರೀ ಜಿ.ಯು ಲಕ್ಷ್ಮಣಗೌಡ ಬಿನ್ ಲೇ ಉಗ್ರಪ್ಪನವರ ಹೆಸರನ್ನು ನಮೂದು ಮಾಡಲಾಗಿರುವುದರಿಂದ ದೂರುದಾರರು ದೂರಿರುವ ದೂರಿನಲ್ಲಿ ಸತ್ಯಾಂಶವಿರುವುದು ಕಂಡುಬಂದಿರುತ್ತದೆ. ಈ ರೀತಿ ತಿದ್ದುಪಡಿ ಮಾಡಲಾಗಿರುವ ಅಸೆಸ್‌ಮೆಂಟ್ ಪುಸ್ತಕದಲ್ಲಿ ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪನವರ ಹೆಸರನ್ನು ನಮೂದು ಮಾಡುವ ಬಗ್ಗೆ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ತೀರ್ಮಾನಿಸಿ ಜಿ.ಯು ತಿಮ್ಮಪ್ಪ ಬಿನ್ ಉಗ್ರಪ್ಪನವರ ಹೆಸರನ್ನು ನಮೂದು ಮಾಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಪ್ರಾಧಿಕಾರವು ಆದೇಶಿಸಿದೆ.

ಇನ್ನು ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ದೂರುದಾರರ ಕೋರಿಕೆ ಇಲ್ಲದೆ ಅಸೆಸ್‌ಮೆಂಟ್ ಪುಸ್ತಕದಲ್ಲಿ ಅವರ ಹೆಸರನ್ನು ಬಿಳಿ ಇಂಕು ಹಾಕಿ ಅಳಿಸಿ ಆ ಹೆಸರಿನ ಮೇಲೆ ಜಿ.ಯು ಲಕ್ಷ್ಮಣಗೌಡ ಬಿನ್ ಉಗ್ರಪ್ಪನವರ ಹೆಸರನ್ನು ಬರೆದಿರುವುದು ಕಾನೂನುಬಾಹಿರವಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 296-ಎ, ಉಪ ಪ್ರಕರಣ (7)ರ ಅಡಿಯಲ್ಲಿ ತಾನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲು

ವಿಫಲನಾಗಿರುವುದರಿಂದ ಅಂದಿನ ಪಂಚಾಯಿತಿ ಅಭಿವೃದ್ದಿ ಅಧಿಕಾರಿ (ಹಾಲಿ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ) ರವರಿಗೆ ರೂ.5000/-ಗಳ ದಂಡವನ್ನು ವಿಧಿಸಿ ಆದೇಶಿಸಿದೆ. ಸದರಿ ದಂಡದ ಮೊತ್ತವನ್ನು 30 ದಿನದೊಳಗಾಗಿ ಜಿಲ್ಲಾ ಪಂಚಾಯಿತಿ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಪ್ರಾಧಿಕಾರವು ಆದೇಶಿಸುತ್ತದೆ.

ಈ ಆದೇಶದ ವಿರುದ್ದ ಮೇಲ್ಮನವಿ ಇದ್ದಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, 3ನೇ ಹಂತ, 3ನೇ ಮಹಡಿ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು ಇವರಿಗೆ ಶಾಸನಾತ್ಮಕ ಅವಧಿಯೊಳಗೆ (30 ದಿನಗಳು) ಸಲ್ಲಿಸಬಹುದು.

**(ಕರಿಯಪ್ಪ ಕೆ)**
ಕುಂದುಕೊರತೆ ನಿವಾರಣಾ ಪ್ರಾಧಿಕಾರ,
ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು,

**ಪ್ರತಿ ಇವರಿಗೆ:–**

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, 3ನೇ ಹಂತ, 3ನೇ ಮಹಡಿ ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತರೀಕೆರೆರವರಿಗೆ ಸೂಕ್ತ ಕ್ರಮಕ್ಕಾಗಿ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಳ್ಳದಮನೆ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರಿಗೆ ಸೂಕ್ತ ಕ್ರಮಕ್ಕಾಗಿ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ, ತರೀಕೆರೆ ತಾಲ್ಲೂಕುರವರಿಗೆ ಸೂಕ್ತ ಕ್ರಮಕ್ಕಾಗಿ
6. ಶ್ರೀ ಜಿ.ಯು ತಿಮ್ಮಪ್ಪ ಬಿನ್ ಲೇಟ್ ಹೆಚ್.ಉಗ್ರಪ್ಪ, ಗುಳ್ಳದಮನೆ ಗ್ರಾಮ, ತರೀಕೆರೆ ತಾಲ್ಲೂಕುರವರಿಗೆ
7. NIC Website ನಲ್ಲಿ ಪ್ರಕಟಿಸಲು, ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿ, ಮತ್ತು ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.
8. ರಕ್ಷಾ ಕಡತ.